**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು**

**ಸಿ.ಸಿ. ಸಂಖ್ಯೆ: 379/2015**

ಫಿರ್ಯಾದಿ : ಮರಿಲಿಂಗಪ್ಪ ಬಿನ್ ಲೇ.ಸೊತ್ತಪ್ಪ ,
ದೇವಿರಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ,
ನಂಜನಗೂಡು ತಾಲ್ಲೂಕು.

ವಿರುದ್ಧ

ಆರೋಪಿ : ಜಾವಿದ್ ಅಹಮದ್ ಬಿನ್ ಇಕ್ಬಾಲ್ ಅಹಮದ್,
ನಂ.1542, ಪಟೇಲ್ ಆರ್.ಕಾಳೇಗೌಡ ರಸ್ತೆ,
ನಂಜನಗೂಡು ಟೌನ್.

: ಆರೋಪಣೆ :

**ವಿನುತಾ.ಡಿ.ಎಸ್ ಬಿ.ಎಸ್‌ಸಿ (ಸೆರಿ), ಎಲ್‌ಎಲ್‌ಬಿ, 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರೆಸುವುದೇನೆಂದರೇ:**

ಮೇಲ್ಕಂಡ ಆರೋಪಿಯಾದ ನೀವು ಮತ್ತು ಫಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗೂ ಹಾಗೂ ಇತರೆ ವ್ಯವಹಾರದ ಖರ್ಚಿಗೂ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರನ್ನು ದಿ.06.10.2014 ರಂದು ಭೇಟಿ ಮಾಡಿ ರೂ.2.00,000/- ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು 02 ತಿಂಗಳೊಳಗಾಗಿ ಮರುಪಾವತಿ ಮಾಡಲು ಒಪ್ಪಿ ಸದರಿ ಮೊಬಲಗನ್ನು ಮರುಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯಾದ ನೀವು ನಿಮ್ಮ ಉಳಿತಾಯ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ನಂಜನಗೂಡು ಶಾಖೆ, ಚಕ್ ನಂ.267415, ರೂ.2.00,000/- ಗಳನ್ನು ದಿನಾಂಕಃ 18.12.2014 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ

ಮೂಲಕ ನಿಮಗೆ ದಿ.17.12.2014 ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಯಾದ ನಿಮಗೆ ಜಾರಿಯಾಗಿದ್ದರೂ ಸಹಾ ಯಾವುದೇ ಜವಾಬನ್ನಾಗಲಿ ಅಥವಾ ನೋಟೀಸಿನಲ್ಲಿ ತಿಳಿಸಿದ ಹಣವನ್ನಾಗಲಿ ಪಾವತಿ ಮಾಡಿರುವುದಿಲ್ಲ, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಜ್ಞಾಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

**ಪ್ರಶ್ನೆ-1 ಃ ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?**

**ಉತ್ತರ ಃ**

**ಪ್ರಶ್ನೆ-2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳುವಿರೋ ?**

**ಉತ್ತರ ಃ**

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 31.3.21 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).

*2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.*
*ನಂಜನಗೂಡು*